(5) ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್‌ವಿಜಿಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರೆಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡೆಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ವಿದ್ಯಾರ್ಥಿಯ ಹೆಸರು, ರಿಜಿಸ್ಟರ್ ನಂಬರಿ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡುವದಿಲ್ಲವು.

(8) ವಿದ್ಯಾರ್ಥಿಗಳು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನು ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಶಿಷ್ಟ ಕಾಗದಗಳೂ ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಎಚ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜು ನೋಟಿಫಿಕೇಷನ್.

ತಾರೀಖು 18ನೆ ಆಗಸ್ಟ್ 1904ನೆ ಇಸವಿ.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಅಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು :—

ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.		ಬೊತ್ತಿಗೆಗಳು ಹೆಚ್ಚ್ಚಾಗಿರುವ ಸಂಖ್ಯೆ.	ಪರಾ.
ಮೈಸೂರು ...	ಹುಣಸೂರು ...	1904ನೆ ಇಸವಿ ನವಂಬರ್ ತಾರೀಖು	19	500	
ಡಿಟೋ	ಶ್ರೀರಂಗಪಟ್ಣ	ಡಿಟೋ ಡಿಟೋ	23	240	
ಬೆಂಗಳೂರು ...	ಬೆಂಗಳೂರು ..	ಡಿಟೋ ಡಿಟೋ	26	120	ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.
ಹಾಸನ ...	ಹಾಸನ ..	1904ನೆ ಇಸವಿ ಡಿಸಂಬರ್	1	200	
ಕಡೂರು ..	ಚಿಕ್ಕಮಗಳೂರು ..	ಡಿಟೋ ಡಿಟೋ	5	200	
ಡಿಟೋ ..	ತರೀಕೆರೆ ..	ಡಿಟೋ ಡಿಟೋ	8	250	
ಶಿವಮೊಗ್ಗ ...	ಶಿವಮೊಗ್ಗ ...	ಡಿಟೋ ಡಿಟೋ	12	440	ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.
ಡಿಟೋ ..	ಸಾಗರ ..	ಡಿಟೋ ಡಿಟೋ	15	175	
ಡಿಟೋ ..	ತೀರ್ಥಹಳ್ಳಿ ..	ಡಿಟೋ ಡಿಟೋ	19	175	ಕಡೂರು ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.

2. ಪ್ರತಿಬಂದು ಕೋಠಿಯಲ್ಲಿಯು ಹರಾಜು ಮಾಡಲ್ಪಡುವ ಸಂದಲ್ ಲಾಟು ಮತ್ತು ಮೊತ್ತ ವಗೈರೆ ತಪಶೀಲು ಐಯಿಂದ ಇದೇ ಸಾಲ್ ಆಕ್ಕ್ಷೋಣರು ಆಖೈರು ವಳಗಾಗಿ ಫಾಯಿಷು ಮಾಡಲ್ಪಡುತ್ತದೆ.

ಎಂ. ಮುತ್ತಣ್ಣ,
ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್ ಇನ್ ಮೈಸೂರು.

346

ತಾರೀಖು 2ನೆ ಸೆಪ್ಟೆಂಬರ್ 1904. 1591

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ನಮ್ಮ ಸೂರು ಡಿಸ್ಟ್ರಿಕ್ಟ್‌ಗೆ ಸೇರಿದ ಇದರಲ್ಲೀ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟು ಫಾರೆಸ್ಟ್ಟುಗಳಲ್ಲಿಯೂ ಹಿಡುವಳಿ ಇಲ್ಲದ ಆಕಾರ ಕಂಡ ಜಮೀನುಗಳು ಆಗಾಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಅನ್ಯುತವಾಹಲ್ ಮತ್ತು ಪಬ್ಲಿಕ್ ಕ್ಯಾಟಲ್ ಕಾವಲುಗಳಲ್ಲಿಯೂ ಗ್ರಾಮ ಬೇಲಿಗಳ ಅಮರಾಯಿ ಮತ್ತು ಅಮರಾಯಿ ಬೇಲಿಗಳಲ್ಲಿಯೂ ದೊರೆಯುವ ಪಸಾರೆ ಹುಟ್ಟುವಳಿಗಳನ್ನು 1904ನೆ ಇಸವಿ ಅಕ್ಟೋಬರು 1ನೆ ತಾರೀಖು ಲಾಗಾಯಿತು 1905ನೆ ಇಸವಿ ಸೆಪ್ಟಂಬರು 30ನೆ ತಾರೀಖಿನ ವರಿಗೆ ಜಮಾಯಿಸುವ ಹಕ್ಕುದಾರಿಯು ಬಹಿರಂಗವಾದ ಹರಾಜು ಮೂಲಕ ತಾಲ್ಲೂಕುವಾರಾಗಿ ಈ ಕೆಳಗೆ ವಿವರಿಸಿರುವ ಆಫೀಸರವರಿಂದ ಈ ಕೆಳಗೆ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು :—

ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡಿಸತಕ್ಕ ಆಫೀಸರು.
ಯಡತೊರೆ	21—9—1904	ತಾಲ್ಲೂಕು ಕಛೇರಿಯಲ್ಲಿ	ಅಮಲ್ದಾರರು ಮತ್ತು ಫಾರೆಸ್ಟ್ ಆಫೀಸರರು.
ಹುಣಸೂರು	22—9—1904		
ಹೆಗ್ಗಡದೇವನಕೋಟೆ	24—9—1904		
ಗುಂಡ್ಲುಪೇಟೆ	21—9—1904		
ಚಾಮರಾಜನಗರ	22—9—1904		
ನಂಜನಗೂಡು	26—9—1904		
ಟಿ. ನರಸೀಪುರ	23—9—1904		
ಮೈಸೂರು	21—9—1904		
ಮಳವಳ್ಳಿ	21—9—1904		
ಮಂಡ್ಯ	24—9—1904		
ಶ್ರೀರಂಗಪಟ್ಟಣ	26—9—1904		
ನಾಗಮಂಗಲ	28—9—1904		
ಕೃಷ್ಣರಾಜಪೇಟೆ	30—9—1904		

ಹುಟ್ಟುವಳಿ ತಪಶೀಲು.

1. ತಾರೇಕಾಯಿ, 2. ಶೀಗೇಕಾಯಿ, 3. ಅರಟವಾಳದಕಾಯಿ, 4. ದಿಂಡಿಗದ ಗೋಂದು, 5. ಕಾಡು ಅರಸಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಬಿಲ್ಲದಬೀಜ, 12. ಹಾಲುಮಡ್ಡಿ, 13. ಚಗಚೆಬೀಜ, 14. ಹೊಂಗೇಬೀಜ, 15. ಗೇರುಬೀಜ, 16. ನಾರಗದಕೊಂಬು, 17. ಗುಗ್ಗಳ, 18. ಅಳಲೇಕಾಯಿ, 19. ಬೇಲದಹಣ್ಣು, 20. ಅರಗು, (ನಾರಾಯಣದುರ್ಗ ಸ್ಟೇಟ್ ಫಾರೆಸ್ಟ್ಟು ವಿನಹಾ) 21. ಶೀತಾಫಲದಹಣ್ಣು, 22. ಬಂಡನಾರು ;—ಈ ಕೆಳಗೆ ವಿವರಿಸಿರುವ ಸ್ಥಳಗಳ ಅಳಲೇಕಾಯಿ ಶೇರಿಯಿಲ್ಲಾ :—

ನಾಗಮಂಗಲದ ತಾಲ್ಲೂಕು ಬಾಬತು :—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರೆನಗುಂಡಿ, 5. ಇಂಡಸಹಳ್ಳಿ, 6. ಮೂಡಹಳ್ಳಿ, 7. ಬೊಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು :—1. ಗುಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಂಪುರ, 5. ಕೊಂಡಹಳ್ಳಿ, 6. ನಾರಣಾಪುರ, 7. ಮಡನಹಳ್ಳಿ, 8. ಕಲ್ಲಕೆರೆ, 9. ಪೇಲಕೊಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು :—1. ಹಾಲಗೆರೆ, 2. ಬೊಸಹಳ್ಳಿ, 3. ಸಿಂಗಾಪುರ, 4. ಚಟಂಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಸಂತಪುರ, 8 ಮಾದಿಗರಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಹಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಚಡ ದರಖಾಸ್ತುದಾರನು ಹರಾಜು ಅವನ ಹೆಸರಿಗೆ ಮಂಜೂರಾದ ಕೂಡ್ಲೆ ಇಜಾರೆ ಪೊಬಲಗು ಪೈಕಿ ಶೇಕಡಾ 25ರಂತೆ ಆಗುವ ಪೂಬಲಗನ್ನು ಶೇವಣಿ ಕಟ್ಟತಕ್ಕದ್ದು. ಅಲ್ಲದೆ ಕಂಟ್ರಾಕ್ಟು ಪರತ್ತು ಮೇರೆ ನಡಿಯಲು ತಕ್ಕ ಖಾತರಿ ಜಾಮೀನು ಸಹ ಕೊಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಕೂಡ್ಲೆ ಬಾಬು ಎರಡನೇ ದಫ ಹರಾಜು ಮಾಡಲ್ಪಟ್ಟು ಆದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಮತ್ತು ಸದರೀ ಲುಕ್ಸಾನ್ ರೆವಿನ್ಯೂ ಡಿವಿಶ್ಯಾಂಡಿನಂತೆ ವಸೂಲು ಮಾಡಿಕೊಳ್ಳಲ್ಪಡುತ್ತೆ.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು 1904ನೆ ಅಕ್ಟೋಬರ್ 1ರಲ್ಲಿ ಬಾಬು ರೂಢಿಸಿಕೊಳ್ಳಲು ಪ್ರವೇಶಿಸತಕ್ಕದ್ದು. ಮತ್ತು ಕಂಟ್ರಾಕ್ಟು ಪೊಬಲಗು ಪೈಕಿ ಉಳಿದ ಪೊಬಲಗನ್ನು ಮತ್ತು ಕಂಟ್ರಾಕ್ಟು ಪೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದು ಆಣೆಯಿಂತೆ ಆಗುವ ಲೋಕಲ್ ಸೆಸ್ ಪೊಬಲಗನ್ನು ಸಹ ಮೂರು ಸಮವಾದ ಖಿಸ್ತುಗಳಲ್ಲಿ ಅಂದರೆ :—

1904ನೆ ಇಸವಿ ಡಿಸೆಂಬರ್ 31ನೆ ತಾರೀಖು.
1905ನೆ ಇಸವಿ ಮಾರ್ಚ್ 31ನೆ ತಾರೀಖು.

1905ನೆ ಇಸವಿ ಜೂನ್ 1ನೆ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಕ್ಲಿಪ್ತವಾದ ತಾರೀಖುಗಳಲ್ಲಿ ಖಿಸ್ತುಗಳನ್ನು ಪಾವತಿ ಮಾಡದೆ ಇದ್ದಲ್ಲಿ ಶೇಕಡಾ ಸಾಲಿಯಾನಾ 6 ರೂಪಾಯಿವೇರೆ ಬಡ್ಡಿ ಕಟ್ಟಲ್ಪಡುತ್ತೆ.

4. ಕಂಟ್ರಾಕ್ಟುದಾರನು ಯಾವ ಬಂದು ಖಿಸ್ತನ್ನು ಪಾವತಿ ಮಾಡದೆ ತಪ್ಪಿದರೂ ಅಥವಾ ಪಾವತಿ ಮಾಡಲು ಸಾವಕಾಶ ಮಾಡಿದರೂ 1905ನೆ ಜೂನ್ ಆಖೈರ್ ವರಿಗೆ ಉಳಿದಿರುವ ಕಾಲದಲ್ಲಿ ಬಾಬು ಜಮಾಯಿಸುವ ಹಕ್ಕು ಹರಾಜು ಮಾಡಲ್ಪಡುವದು. ಮತ್ತು ಅವನ ಡಿಪಾಜಿಟ್ಟು ಪೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು. ಪರಂತು ತಪ್ಪಿಹೋದ ಕಂಟ್ರಾಕ್ಟುದಾರನು ಮತ್ತು ಜಾಮೀನುದಾರನು ಸಹ ಅದರಿಂದ ಉಂಟಾಗುವ ನಷ್ಟಕ್ಕೆ ಗುರಿಮಾಡಲ್ಪಡುವರು.

5. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರರ ಸ್ಥಿರಪಟ್ಟ ಹಕ್ಕುದಾರಿ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಇಜಾರೆಯಲ್ಲಿ ಆಗಿರುವದಿಲ್ಲ

8. ಹರಾಜು, ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಶ್ನರವರ ಮಂಜೂರಾತಿಗೆ ಒಳಪಟ್ಟಿದ್ದಾಗಿದೆ.

9. ಕಂಟ್ರಾಕ್ಟುದಾರನ ಅಥವಾ ಅವನ ಕಡೆ ಕೂಲಿ ಜನಗಳ ಅಜಾಗ್ರತೆಯಿಂದ ಜಂಗಲಿಗೆ ಬೀಳುವ ಬೆಂಕಿ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

ಸಿ ಅಪ್ಪಯ್ಯ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ್, ಮೈಸೂರು ಡಿಸ್ಟ್ರಿಕ್ಟು.